# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಬುಧವಾರ, ೨೪, ಜೂನ್, ೨೦೨೬ (ಆಷಾಢ, ೦೩, ಶಕವರ್ಷ, ೧೯೪೮)<br>BENGALURU, WEDNESDAY, 24, JUNE, 2026 ( ASHADHA, 03, SHAKAVARSHA, 1948) | ನಂ. ೪೫೯<br>No. 459 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿ/ನೌಕರರ ಕಾರ್ಯನಿರ್ವಹಣಾ ವರದಿಗಳ ವರದಿ ಮಾಡುವ, ಪುನರಾವಲೋಕನಾ ಪ್ರಾಧಿಕಾರ ಮತ್ತು ಅಂಗೀಕರಿಸುವ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರವನ್ನು ರಚಿಸುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಕಂಇ 57 ಮುಸೇವಿ 2012 ದಿನಾಂಕ:06.08.2014

2. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಸುತ್ತೋಲೆ ಸಂಖ್ಯೆಸಿಬ್ಬಂದಿ 1/ಸಿಆರ್ 11ಎ/2011-12, ದಿನಾಂಕ: 20.06.2013

3. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ: HRICE-EST0EST2/30/2026 ದಿನಾಂಕ:10.06.2026.

* * * * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿನ ಆದೇಶದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಸಮೂಹ 'ಎ' ಅಧಿಕಾರಿಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ವರದಿ ಮಾಡುವ, ಪುನರಾವಲೋಕನಾ ಪ್ರಾಧಿಕಾರ ಮತ್ತು ಅಂಗೀಕರಿಸುವ ಪ್ರಾಧಿಕಾರಗಳನ್ನು ನಿರ್ದಿಷ್ಟಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿನ ಸಮೂಹ "ಬಿ" ಮತ್ತು "ಸಿ" ನೌಕರರ ಕಾರ್ಯನಿರ್ವಹಣಾ ವರದಿಗಳನ್ನು ವರದಿ ಮಾಡುವ, ಪುನರಾವಲೋಕನಾ ಪ್ರಾಧಿಕಾರ ಮತ್ತು ಅಂಗೀಕರಿಸುವ ಪ್ರಾಧಿಕಾರಗಳನ್ನು ಉಲ್ಲೇಖಿತ (2)ರ ಸುತ್ತೋಲೆಯಲ್ಲಿ ನಿರ್ದಿಷ್ಟಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿನ ಧಾರ್ಮಿಕ ದತ್ತಿ ಇಲಾಖೆಯ ಸಮೂಹ 'ಎ' ಹಿರಿಯ ಶ್ರೇಣಿ ಮತ್ತು "ಎ" ಕಿರಿಯ ಶ್ರೇಣಿ ಹಾಗೂ "ಬಿ" ಮತ್ತು "ಸಿ" ಅಧಿಕಾರಿ ಮತ್ತು ನೌಕರರುಗಳ ಕಾರ್ಯನಿರ್ವಹಣಾ ವರದಿಗಳನ್ನು ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು)

ನಿಯಮಾವಳಿ-2000 ರನ್ವಯ ವರದಿ ಮಾಡುವ, ಪುನರಾವಲೋಕನಾ ಪ್ರಾಧಿಕಾರ ಮತ್ತು ಅಂಗೀಕರಿಸುವ ಪ್ರಾಧಿಕಾರಗಳನ್ನು ನಿರ್ದಿಷ್ಟಪಡಿಸಿ ಸರ್ಕಾರದ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕಂಇ 119 ಮುಸೇವಿ 2024,**
**ಬೆಂಗಳೂರು, ದಿನಾಂಕ: 23-06-2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಧಾರ್ಮಿಕ ದತ್ತಿ ಇಲಾಖೆಯ ಸಮೂಹ 'ಎ', "ಬಿ" ಮತ್ತು "ಸಿ" ವೃಂದದ ಅಧಿಕಾರಿ/ ನೌಕರರುಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ವರದಿ ಮಾಡುವ ಪ್ರಾಧಿಕಾರ (**Reporting Authority**), ಪುನರಾವಲೋಕನಾ ಪ್ರಾಧಿಕಾರ (**Reviewing Authority**) ಮತ್ತು ಅಂಗೀಕರಿಸುವ ಪ್ರಾಧಿಕಾರ (**Accepting Authority**)ಗಳನ್ನು ಹಾಗೂ ಮೇಲ್ಮನವಿ ಪ್ರಾಧಿಕಾರಗಳನ್ನು **(Appellate Authority)** ಈ ಕೆಳಕಂಡಂತೆ ಪುನರ್‌ರಚಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಪದನಾಮ/ವೃಂದ | ವರದಿ ಮಾಡುವ ಪ್ರಾಧಿಕಾರಿ | ಪುನರಾವಲೋಕನಾ ಪ್ರಾಧಿಕಾರಿ | ಅಂಗೀಕರಿಸುವ ಪ್ರಾಧಿಕಾರಿ |
|---|---|---|---|---|
| I. | **ಸಮೂಹ 'ಎ' ದರ್ಜೆಯ ಹಿರಿಯ ಶ್ರೇಣಿ ಅಧಿಕಾರಿಗಳು** | | | |
| 1. | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು/ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿಗಳು/ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು | ಆಯುಕ್ತರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| II. | **ಸಮೂಹ 'ಎ' ದರ್ಜೆ ಕಿರಿಯ ಶ್ರೇಣಿ ಅಧಿಕಾರಿಗಳು** | | | |
| 2. | ಸಹಾಯಕ ಆಯುಕ್ತರು/ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು/ ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಛತ್ರ, ತಿರುಮಲ | ಜಿಲ್ಲಾಧಿಕಾರಿಗಳು | ಆಯುಕ್ತರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| 3 | ಪ್ರಾಂಶುಪಾಲರು (ಸಂಸ್ಕೃತ ಕಾಲೇಜು) | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| 4 | ಪ್ರಾಧ್ಯಾಪಕರು/ ಹಿರಿಯ ಪಂಡಿತರು (ಸಂಸ್ಕೃತ ಕಾಲೇಜು) | ಪ್ರಾಂಶುಪಾಲರು | ಆಯುಕ್ತರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |

| | | | | |
|---|---|---|---|---|
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೇಂದ್ರ ಕಛೇರಿ | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| III. | **ಪ್ರವರ್ಗ "ಎ" ದೇವಾಲಯಗಳು ಮತ್ತು ಅಧೀನ ಕಛೇರಿಗಳು** | | | |
| 6 | ಇಲಾಖಾ ಅಧೀನ ಪ್ರಾಧಿಕಾರಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು | ಕಾರ್ಯದರ್ಶಿ, ಅಭಿವೃದ್ಧಿ ಪ್ರಾಧಿಕಾರ | ಆಯುಕ್ತರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| 7 | ಪ್ರಾಧಿಕಾರದ ಸಮೂಹ "ಬಿ" ಅಧಿಕಾರಿಗಳು ಮತ್ತು "ಸಿ" ನೌಕರರು. | ಕಾರ್ಯದರ್ಶಿ, ಅಭಿವೃದ್ಧಿ ಪ್ರಾಧಿಕಾರ | ಜಿಲ್ಲಾಧಿಕಾರಿಗಳು | ಆಯುಕ್ತರು |
| 8 | ಹಿರಿಯ ಆಗಮ ಪಂಡಿತರು | ಆಯುಕ್ತರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| 9 | ಕಿರಿಯ ಆಗಮ ಪಂಡಿತರು | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| 10 | ಗ್ರೂಪ್ "ಬಿ" ಅಧಿಕಾರಿಗಳು (ಕೇಂದ್ರ ಕಛೇರಿ) | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು | ಆಯುಕ್ತರು |
| 11 | ಧಾರ್ಮಿಕ ದತ್ತಿ ತಹಶೀಲ್ದಾರ್ (ಜಿಲ್ಲಾಧಿಕಾರಿಗಳ ಕಛೇರಿ) | ಅಪರ ಜಿಲ್ಲಾಧಿಕಾರಿಗಳು | ಜಿಲ್ಲಾಧಿಕಾರಿಗಳು | ಆಯುಕ್ತರು |
| 12 | ಗ್ರೂಪ್ "ಬಿ" ಅಧಿಕಾರಿ ತಿರುಮಲ (ಛತ್ರಗಳು) | ವಿಶೇಷಾಧಿಕಾರಿಗಳು | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು |
| 13 | ಸಹಾಯಕ ಪ್ರಾಧ್ಯಾಪಕರು/ ಹಿರಿಯ ಪಂಡಿತರು/ಉಪಾಧ್ಯಾಯರು (ಸಂಸ್ಕೃತ ಕಾಲೇಜು) | ಪ್ರಾಂಶುಪಾಲರು | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು |
| 14 | ಗ್ರೂಪ್ "ಬಿ" ಅಧಿಕಾರಿಗಳು | ಸಹಾಯಕ ಆಯುಕ್ತರ / ಉಪ ವಿಭಾಗಾಧಿಕಾರಿಗಳು | ಜಿಲ್ಲಾಧಿಕಾರಿಗಳು | ಆಯುಕ್ತರು |
| 15 | ಗ್ರೂಪ್ "ಸಿ" ನೌಕರರು (ಕೇಂದ್ರ ಕಛೇರಿ) | ಕಛೇರಿ ಸಹಾಯಕರು (ಸಂಬಂಧಿಸಿದ ಶಾಖೆ) | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | | |
|---|---|---|---|---|
| 16 | ಗ್ರೂಪ್ "ಸಿ" ನೌಕರರು (ಜಿಲ್ಲಾಧಿಕಾರಿಗಳ ಕಛೇರಿ) | ಧಾರ್ಮಿಕ ದತ್ತಿ ತಹಶೀಲ್ದಾರ್ / ಕಛೇರಿ ಸಹಾಯಕರು | ಅಪರ ಜಿಲ್ಲಾಧಿಕಾರಿಗಳು | ಜಿಲ್ಲಾಧಿಕಾರಿಗಳು |
| 17 | ಗ್ರೂಪ್ "ಸಿ" ನೌಕರರು (ಸಹಾಯಕ ಆಯುಕ್ತರ ಕಛೇರಿ / ಉಪ ವಿಭಾಗಾಧಿಕಾರಿಗಳ ಕಛೇರಿ | ಸಹಾಯಕ ಆಯುಕ್ತರ / ಉಪ ವಿಭಾಗಾಧಿಕಾರಿಗಳ | ಅಪರ ಜಿಲ್ಲಾಧಿಕಾರಿಗಳು | ಜಿಲ್ಲಾಧಿಕಾರಿಗಳು |
| 18 | ಗ್ರೂಪ್ "ಸಿ" ನೌಕರರು (ಕರ್ನಾಟಕ ರಾಜ್ಯ ಛತ್ರಗಳು) | ವಿಶೇಷಾಧಿಕಾರಿ/ ಪತ್ರಾಂಕಿತ ವ್ಯವಸ್ಥಾಪಕರು | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು |
| 19 | ಸಹಾಯಕ ಪ್ರಾಧ್ಯಾಪಕರು/ ಹಿರಿಯ ಪಂಡಿತರು/ ಉಪಾಧ್ಯಾಯರು (ಸಂಸ್ಕೃತ ಕಾಲೇಜು) | ಪ್ರಾಂಶುಪಾಲರು | ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಉಪ ಆಯುಕ್ತರು | ಆಯುಕ್ತರು |
| 20 | ಗ್ರೂಪ್ "ಸಿ" ನೌಕರರು | ಕಾರ್ಯನಿರ್ವಾಹಕ ಅಧಿಕಾರಿ/ (ಗ್ರೂಪ್ "ಬಿ" ಮತ್ತು "ಎ" ಸಹಾಯಕ ಆಯುಕ್ತರು / ಉಪ ವಿಭಾಗಾಧಿಕಾರಿಗಳು | ಅಪರ ಜಿಲ್ಲಾಧಿಕಾರಿಗಳು | ಜಿಲ್ಲಾಧಿಕಾರಿಗಳು |

| IV. | **ಪ್ರವರ್ಗ "ಬಿ" ಮತ್ತು "ಸಿ" ದೇವಾಲಯಗಳು ಮತ್ತು ಅಧೀನ ಕಛೇರಿಗಳು** | | | |
|---|---|---|---|---|
| 21 | ಎಲ್ಲಾ ನೌಕರರು | ತಹಶೀಲ್ದಾರ್ / ಉಪ ವಿಭಾಗಾಧಿಕಾರಿಗಳು/ ಸಹಾಯಕ ಆಯುಕ್ತರು/ ಕಾರ್ಯನಿರ್ವಾಹಕ ಅಧಿಕಾರಿಗಳು | ಅಪರ ಜಿಲ್ಲಾಧಿಕಾರಿಗಳು | ಜಿಲ್ಲಾಧಿಕಾರಿಗಳು |

| V. | **ವೃಂದ** | **ಮೇಲ್ಮನವಿ ಪ್ರಾಧಿಕಾರ** |
|---|---|---|
| 1. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ಇವರು ಅಂಗೀಕಾರಿಸುವ ಪ್ರಾಧಿಕಾರವಾಗಿರುವ ವೃಂದಗಳಿಗೆ | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| 2. | ಆಯುಕ್ತರು ಅಂಗೀಕಾರಿಸುವ ಪ್ರಾಧಿಕಾರವಾಗಿರುವ ವೃಂದಗಳಿಗೆ | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ |
| 3. | ಜಿಲ್ಲಾಧಿಕಾರಿಗಳು ಅಂಗೀಕಾರಿಸುವ ಪ್ರಾಧಿಕಾರವಾಗಿರುವ ವೃಂದಗಳಿಗೆ | ಆಯುಕ್ತರು |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH